ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 690/2022

ಸಾಕ್ಷಿಗೆ ದಿನಾಂಕ 02-08-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 2

| | | |
|---|---|---|
| ಹೆಸರು | ಃ | ಶ್ರೀಕಾಂತ್ |
| ತಂದೆಯ ಹೆಸರು | ಃ | ನಿಂಗಾನಾಯ್ಕ |
| ವಯಸ್ಸು | ಃ | 41 ವರ್ಷ |
| ಉದ್ಯೋಗ | ಃ | ಪಿ ಡಿ ಓ ಗ್ರಾಮ ಪಂಚಾಯ್ತಿ ಮಾಲವಿ |
| ವಾಸ ಸ್ಥಳ | ಃ | ಮಾಲವಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 02-06-2022 ರಿಂದ ಮಾಲವಿ ಗ್ರಾಮ ಪಂಚಾಯ್ತಿಯಲ್ಲಿ ಪಿ ಡಿ ಓ ಅಂತಾ ಕರ್ತವ್ಯ ನಿರ್ವಹಿಸತ್ತಿದ್ದೇನೆ.

ನಾನು ಆರೋಪಿತರನ್ನು ಇಟಗಿ ಪೋಲೀಸ್ ಠಾಣೆಯಲ್ಲಿ ನೋಡಿರುತ್ತೇನೆ. ದಿನಾಂಕಃ 26-07-2022 ರಂದು ಸಂಜೆ 5 ಗಂಟೆ ಸುಮಾರಿಗೆ ಚಾಸಾ-4 ರವರು ನನಗೆ ದೂರವಾಣಿ ಕರೆ ಮಾಡಿ ಕೋಗಳಿ ತಾಂಡದಲ್ಲಿರುವ ಸಾರ್ವಜನಿಕ ಗ್ರಂಥಾಲಯದ ಬಾಗಿಲನ್ನು ಯಾರೋ ಮುರಿದಿದ್ದಾರಂತಾ ನನಗೆ ತಿಳಿಸಿದರು. ಆಗ ನಾನು, ಚಾಸಾ-4 ಮತ್ತು 5 ರವರು ಸೇರಿ ಸದರಿ ಗ್ರಂಥಾಲಯಕ್ಕೆ ಹೋಗಿ ನೋಡಲಾಗಿ ಗ್ರಂಥಾಲಯದ ಬಾಗಿಲು ಮುರಿದಿದ್ದು ಇತ್ತು ಒಳಗೆ ಹೋಗಿ ನೋಡಲಾಗಿ ಅಲ್ಲಿದ್ದ 15 ಕಬ್ಬಿಣದ ಕುರ್ಚಿಗಳು ಮತ್ತು ಗೋಡೆ ಗಡಿಯಾರ ಇರಲಿಲ್ಲ. ಅವು ಯಾರೋ ಕಳ್ಳರು ಕಳುವು ಮಾಡಿಕೊಂಡಿರುತ್ತಾರಂತಾ ನನಗೆ ತಿಳಿಯಿತು. ನಂತರ ನಾನು ಈ ವಿಚಾರವನ್ನು ನಮ್ಮ ಹಿರಿಯ ಅಧಿಕಾರಿಗಳಿಗೆ ಸದರಿ ವಿಚಾರ ತಿಳಿಸಿ ಮರುದಿನ ರಾತ್ರಿ 10 ಗಂಟೆಗೆ ಇಟಗಿ ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ.

ಸದರಿ ದೂರನ್ನು ನೋಡಿದರೆ ನಾನು ಗುರುತಿಸುತ್ತೇನೆ ಸಾಕ್ಷಿಯು ನಿಪಿ-4 ದೂರನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ದೂರು ಕೊಟ್ಟ ದಿನವೇ ನಾನು ಠಾಣೆಯಲ್ಲಿ ಆರೋಪಿತರನ್ನು ನೋಡಿದ್ದೇನೆ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಆರೋಪಿತರನ್ನು ನೋಡಿದರೆ ನಾನು ಗುರುತಿಸುತ್ತೇನೆ. ಆರೋಪಿತರ ಗೈರುಹಾಜರಾತಿಯಲ್ಲಿ ಆರೋಪಿತರನ್ನು ಗುರುತಿಸಲು ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ ಅಂತಾ ತಿಳಿಸಿರುತ್ತಾರೆ. ಆ ದಿನ ಕಳುವಾಗಿದ್ದ 15 ಕಬ್ಬಿಣದ

ಕುರ್ಚಿಗಳು ಮತ್ತು ಒಂದು ಗಡಿಯಾರವನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು ಮಾ-1 ಮತ್ತು 2 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು. ಆರೋಪಿತರ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ಚಾಸಾ-3 ಮತ್ತು 5 ನಮ್ಮ ಸಿಬ್ಬಂದಿಗಳು. ನನ್ನ ಅಧೀನದಲ್ಲಿ ಕೆಲಸ ಮಾಡುವ ಸಿಬ್ಬಂದಿಗಳು ನಿಯಮಾನುಸಾರ ನೀಡುವ ನಿರ್ದೇಶನಗಳನ್ನು ಪಾಲಿಸುತ್ತಾರೆ. ನಾನು ಘಟನೆ ನಡೆಯುವ 1ವರೆ ತಿಂಗಳ ಮುಂಚಿತವಾಗಿ ಸದರಿ ಗ್ರಾಮ ಪಂಚಾಯ್ತಿಯ ಪಿ ಡಿ ಓ ಅಂತಾ ಅಧಿಕಾರ ವಹಿಸಿಕೊಂಡಿರುತ್ತೇನೆ. ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಕಚೇರಿಯ ಮಾಹಿತಿಗಳನ್ನು ಪಡೆದುಕೊಂಡು ಅಧಿಕಾರ ಸ್ವೀಕರಿಸಿರುತ್ತೇನೆ. ಸದರಿ ಗ್ರಂಥಾಲಯವೂ ಸಹಾ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ. ಸದರಿ ಗ್ರಂಥಾಲಯದಲ್ಲಿ ಏನೇನು ಸಾಮಗ್ರಿಗಳು ಪಿಠೋಪಕರಣಗಳು ಮತ್ತು ಯಾರು ಸಿಬ್ಬಂದಿಗಳು ಕೆಲಸ ಮಾಡುತ್ತಾರೆನ್ನುವ ಮಾಹಿತಿ ಸಹಾ ಇರುತ್ತದೆಂದರೆ ಸರಿ. ಈ ಘಟನೆಯಾಗುವ ಪೂರ್ವದಿಂದಲೂ ಸದರಿ ಗ್ರಂಥಾಲಯ ಚಾಲನೆಯಲ್ಲಿತ್ತು. ಸದರಿ ಗ್ರಂಥಾಲಯಕ್ಕೆ ಗ್ರಂಥಪಾಲಕರು ಅಂತಾ ಸಿಬಬಂದಿ ಇರುತ್ತಾರೆಂದರೆ ಸಾಕ್ಷಿಯು ನಮ್ಮ ಸಿಬ್ಬಂದಿಯಲ್ಲಿ ಒಬ್ಬರನ್ನು ನಿಯೋಜನೆ ಮಾಡಿರುತ್ತೇವೆನ್ನುತ್ತಾರೆ. ಕೋಗಳಿ ತಾಂಡದ ಗ್ರಂಥಾಲಯಕ್ಕೆ ಯಾರು ಗ್ರಂಥಪಾಲಕರು ಅಂತಾ ಆ ಸಮಯದಲ್ಲಿ ಕೆಲಸ ನಿರ್ವಹಿಸುತ್ತಿದರೆನ್ನುವುದು ನನಗೆ ಮಾಹಿತಿ ಇಲ್ಲ, ಸಾಕ್ಷಿ ಮುಂದುವರೆದು ಸದರಿ ಗ್ರಂಥಾಲಯಕ್ಕೆ ರಾಮಾನಾಯ್ಕ ಎನ್ನುವವರು ಆಸ ಮಯದಲ್ಲಿ ಗ್ರಂಥಪಾಲರು ಆಗಿದ್ದರು ಎನ್ನುತ್ತಾರೆ. ಸದರಿ ಗ್ರಂಥಾಲಯದ ಜವಾಬ್ದಾರಿಯನ್ನು ಗ್ರಂಥಪಾಲಕರೇ ನಿರ್ವಹಿಸಬೇಕು ಎಂದರೆ ಸರಿ. ಸದರಿ ಘಟನೆ ನಡೆದ ಸಮಯದಲ್ಲಿ ಗ್ರಂಥಪಾಲಕರು ಅಲ್ಲಿ ಇರಲಿಲ್ಲ. ಘಟನೆ ನಡೆದಿದೆ ಅಂತಾ ಹೇಳುವ ಸಮಯದಲ್ಲಿ ಗ್ರಂಥಪಾಲಕರು ಅಲ್ಲಿ ಹಾಜರಿದ್ರಾ ಎಂದರೆ ಸಾಕ್ಷಿಯು ಗ್ರಂಥಾಲಯವು ಬೆಳಗಿನ ಅವಧಿಯಲ್ಲಿ ನಡೆಯುವುದರಿಂದ ಸಂಜೆಯ ಹೊತ್ತು ಅಲ್ಲಿ ಯಾರೂ ಗ್ರಂಥಪಾಲಕರು ಇರುವುದಿಲ್ಲವೆನ್ನುತ್ತಾರೆ. ಘಟನೆಯ ಕುರಿತು ಮಾಹಿತಿಯನ್ನು ನನಗೆ ಗ್ರಂಥಪಾಲಕರಾದ ರಾಮಾನಾಯ್ಕ ನನಗೆ ನೀಡಿಲ್ಲ.

ನಾನು ಪ್ರಭಾರ ತೆಗೆದುಕೊಳ್ಳುವ ಸಮಯದಲ್ಲಿ ನಮ್ಮ ಕಚೇರಿಯ ಮತ್ತು ಸದರಿ ಗ್ರಂಥಾಲಯದ ಪ್ರತಿಯೊಂದು ವಸ್ತು ಮತ್ತು ಪಿಠೋಪಕರಣದ ಮಾಹಿತಿಯನ್ನು ಪಡೆದು ಪ್ರಭಾರ ತೆಗೆದುಕೊಂಡಿರುತ್ತೇನೆಂದರೆ ಸರಿ. ಗ್ರಂಥಾಲಯದಲ್ಲೆರುವಂತಹ ಸಾಮಗ್ರಿ ಬಗ್ಗೆ ವಿವರವಾದ ಲಿಖಿತ ಮಾಹಿತಿ ನಮ್ಮ ಬಳಿ ಇರುತ್ತದೆ. ನಮ್ಮ ಕಚೇರಿಯಲ್ಲಿದ್ದ ಸಾಮಗ್ರಿಗಳ ಬಗ್ಗೆ ಲಿಖಿತ ಮಾಹಿತಿಯನ್ನು ನಾನು ತನಿಖಾಧಿಕಾರಗಳ ಮುಂದೆ ಹಾಜರುಪಡಿಸಿರುತ್ತೇನೆ. ಸದರಿ ಕಬ್ಬಿಣದ

ಕುರ್ಚಿಗಳು ಯಾವ ಕಂಪನಿಯದ್ದು ಅಂತಾ ಇರುತ್ತದೆ. ಸದರಿ ಕಬ್ಬಿಣದ ಕುರ್ಚಿಗಳು ಯಾವ ಏಜೆನ್ಸಿಯಿಂದ ನಮಗೆ ಸರಬರಾಜಾಗಿರುತ್ತದೆನ್ನುವ ಮಾಹಿತಿ ಇರುತ್ತದೆಂದರೆ ಇಲ್ಲ. ಗ್ರಂಥಾಲಯದಲ್ಲಿ ಗ್ರಂಥಾಲಯ ಉಪಯೋಗಕ್ಕಾಗಿ ಬಂದು ಹೋಗುವವರ ವಿವರವು ಗ್ರಂಥಪಾಲಕರು ನಿರ್ವಹಿಸುತ್ತಾರೆಂದರೆ ಸರಿ. ಗ್ರಂಥಪಾಲಕರಿಗೆ ದೂರು ಕೊಡಲು ಯಾವುದೇ ತೊಂದರೆ ಇರಲಿಲ್ಲ. ಗ್ರಂಥಪಾಲಕರ ಪರವಾಗಿ ನಾನು ದೂರು ನೀಡಿದ್ದೇನಂತಾ ನಾನು ನನ್ನ ದೂರಿನಲ್ಲಿ ಬರೆಸಿಲ್ಲ. ನಮ್ಮ ಮೇಲಾಧಿಕಾರಿಗಳು ದೂರು ನೀಡಲು ನನಗೆ ಲಿಖಿತವಾಗಿ ಪರವಾನಿಗೆ ನೀಡಿಲ್ಲ ಮೌಖಿಕವಾಗಿ ಸೂಚಿಸಿರುತ್ತಾರೆ. ಆ ಬಗ್ಗೆ ನನ್ನ ದೂರಿನಲ್ಲಿ ಬರೆಸಿಲ್ಲ.

ನನ್ನ ಸೇವಾವಧಿಯಲ್ಲಿ ನನ್ನ ವಿರುದ್ಧ ಕರ್ತವ್ಯಲೋಪದ ಬಗ್ಗೆ ಮೇಲಾಧಿಕಾರಿಗಳ ಬಳಿ ಮತ್ತು ಠಾಣೆಯಲ್ಲಿ ದೂರು ಹೋಗಿರುತ್ತವೆಂದರೆ ಸರಿಯಲ್ಲ. ದೂರನ್ನು ನಾನು ಪೋಲೀಸ್ ಠಾಣೆಯಲ್ಲಿ ಬೆರಳಚ್ಚು ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಯಾರ್ಯಾರು ಇದ್ದರೆಂದು ನನಗೆ ಹೇಳಲು ಬರುವುದಿಲ್ಲ. ನ್ಯಾಯಾಲಯದ ಮುಂದಿರುವಂತಹ ಮು ಮಾಲುಗಳಂತಹ ವಸ್ತುಗಳು ಬೇರೆ ಕಡೆ ಸಿಗುತ್ತವೆಂದರೆ ಸರಿ. ಗ್ರಂಥಾಲಯವನ್ನು ಸಾರ್ವಜನಿಕರನ್ನು ಉಪಯೋಗಿಸುತ್ತಿದ್ದರು. ಸದರಿ ಗ್ರಂಥಾಲಯದಲ್ಲಿರುವಂತಹ ಕುರ್ಚಿಗಳು ಮತ್ತು ಟೇಬಲ್ ಗಳು ಸಾರ್ವಜನಿಕರು ಉಪಯೋಗಿಸುತ್ತಾರೆಂದರೆ ಸರಿ. ಆದ್ದರಿಂದ ಸದರಿ ಕುರ್ಚಿಗಳು ಸವಕಳಿ ಬರುತ್ತವೆಂದರೆ ಸರಿ. ಸದರಿ ಕುರ್ಚಿಗಳು ಸಾರ್ವಜನಿಕ ಉಪಯೋಗಕ್ಕಾಗಿ ಇಟ್ಟಿದ್ದು ಇತ್ತು. ನ್ಯಾಯಾಲಯದ ಮುಂದಿರುವಂತಹ ಮು ಮಾ-1 ಹೊಸ ಕುರ್ಚಿಗಳು ಇರುತ್ತವೆಂದರೆ ಸರಿ. ಆರೋಪಿತರು ಯಾವುದೇ ಕಳ್ಳತನ ಮಾಡಿಲ್ಲ, ಅವರ ವಿರುದ್ದ ನಾನು ಸುಳ್ಳು ದೂರನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಆರೋಪಿತರು ಸದರಿ ಗ್ರಂಥಾಲಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುತ್ತಿಲ್ಲ ಅಂತಾ ನನ್ನ ವಿರುದ್ಧ ಮೇಲಾಧಿಕಾರಿಗಳಿಗೆ ದೂರು ನೀಡಿದ್ದರು ಅದರಿಂದ ತಪ್ಪಿಸಿಕೊಳ್ಳುವ ಸಂಬಂಧ ನಾನು ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನನ್ನ ಕರ್ತವ್ಯ ಲೋಪವನ್ನು ಮುಚ್ಚಿಹಾಕುವ ಸಲುವಾಗಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ಸಿಬ್ಬಂದಿ ಸೇರಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ. ಆರೋಪಿತನು ಯಾವುದೇ ಗ್ರಂಥಾಲಯದ ಬಾಗಿಲು ಮುರಿದಿಲ್ಲ, ಯಾವುದೇ ವಸ್ತುಗಳನ್ನು ಕಳುವು ಮಾಡಿಲ್ಲ ನನ್ನ ಕರ್ತವ್ಯ ಲೋಪ ಮುಚ್ಚಿಕೊಳ್ಳುವ ಸಲುವಾಗಿ ಸುಳ್ಳು ದೂರನ್ನು ದಾಖಲಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ